ದಿನಾಂಕ: **<u>02.06.2026</u>** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ನೀಡಲಾಯಿತು.

<u>ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಕೆ ಎಂ ಎಂ ವಕೀಲರಿಂದಃ-</u>

8. ಹಳೆಯ ಸರ್ವೇ ನಂ.60 ರಲ್ಲಿ ಒಟ್ಟು ಎಷ್ಟು ಎಕರೆ ಇತ್ತು ಎಂದು ಹೇಳಲು ಆಗುವುದಿಲ್ಲ. ಸರ್ವೇ ನಂ.60/ಪಿ29 ಆದ ನಂತರ ಎಷ್ಟು ಎಕರೆ ವಿಸ್ತೀರ್ಣ ಇತ್ತು ಎಂದು ಗೊತ್ತಿಲ್ಲ. ಸರ್ವೇ ನಂ.101 ಆದ ನಂತರ 2 ಎಕರೆ 20 ಗುಂಟೆ ವಿಸ್ತೀರ್ಣ ಆಗಿರುತ್ತದೆ. ಸರ್ವೇ ನಂ.60 ರ ಸ್ವತ್ತು ಸರ್ವೇ ನಂ.60/ಪಿ29 ನಂಬರ್ ಆದ ನಂತರ ಸುಮಾರು ಜನರಿಗೆ ಮಂಜೂರು ಆಗಿರುತ್ತದೆ ಎಂದರೆ ಸರಿ. 2007, 2009 ಮತ್ತು 2016 ರಲ್ಲಿ ದಾವಾ ಸ್ವತ್ತನ್ನು ಸರ್ವೇ ಮಾಡಿಸಿರುತ್ತೇನೆ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ದಾವಾ ಸ್ವತ್ತಿನ ಉತ್ತರಕ್ಕೆ 1 ನೇ ಪ್ರತಿವಾದಿಯ ಜಮೀನು ಬರುತ್ತದೆ. ಅದರ ಸರ್ವೇ ನಂಬರ್ ನನಗೆ ಗೊತ್ತಿಲ್ಲ. ಮುಂದುವರೆದು ಸಾಕ್ಷಿಯು ಸರ್ವೇ ನಂ.94 ಅಥವಾ 95 ಇರಬಹುದು ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಗೆ ಸಾಗುವಳಿ ಮೂಲಕ ಸರ್ಕಾರದಿಂದ 1 ಎಕರೆ 5 ಗುಂಟೆ ಜಮೀನು ಮಂಜೂರು ಆಗಿರುತ್ತದೆ. 2007, 2009 ಮತ್ತು 2016 ರಲ್ಲಿ ದಾವಾ ಸ್ವತ್ತನ್ನು ಸರ್ವೇ ಮಾಡಿಸಿದಾಗ 1 ನೇ ಪ್ರತಿವಾದಿಗೆ ನೋಟಿಸ್ಸು ಕೊಟ್ಟಿದ್ದರೇ ಎಂಬ ಪ್ರಶ್ನೆಗೆ ಸಾಕ್ಷಿಯು ನಾನು ಇರಲಿಲ್ಲ ಹಾಗಾಗಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸರ್ವೇ ಕಾಲದಲ್ಲಿ ನಾನು ಸ್ಥಳದಲ್ಲಿ ಇಲ್ಲದೇ ಇರುವ ಕಾರಣ ನನಗೆ ಪ್ರತಿವಾದಿಯ ಸ್ವತ್ತು ಯಾವ ದಿಕ್ಕಿಗೆ ಬರುತ್ತದೆ ಎಂದು ನಿರ್ದಿಷ್ಟವಾಗಿ ಗೊತ್ತಿಲ್ಲ ಎಂದರೆ ಸರಿಯಲ್ಲ. ನಾನು ಸರ್ವೇ ದಾಖಲೆಗಳನ್ನು ನೋಡಿ ಪ್ರತಿವಾದಿಯ ಜಮೀನು ಉತ್ತರಕ್ಕೆ ಬರುತ್ತದೆ ಎಂದು ನುಡಿಯುತ್ತಿದ್ದೇನೆ ಎಂದರೆ ಸರಿ. ದಾವಾ ಸ್ವತ್ತನ್ನು ಸರ್ವೇ ಮಾಡುವ ಕಾಲಕ್ಕೆ ನಾನು ಹಾಜರಿದ್ದೆ. ಸರ್ವೇ ಮಾಡುವ ಕಾಲಕ್ಕೆ ದಾವಾ ಸ್ವತ್ತಿನಲ್ಲಿ ನಾವು ಸ್ವಾಧೀನದಲ್ಲಿ ಇದ್ದೆವು. ಸರ್ವೇ ಮಾಡುವ ಕಾಲಕ್ಕೆ ದಾವಾ ಸ್ವತ್ತಿನಲ್ಲಿ ಯಾವುದೇ ಬೆಳೆ ಇರುವುದಿಲ್ಲ.

9. 1 ನೇ ಪ್ರತಿವಾದಿರವರ ಜಮೀನಿಗೆ ಸಂಬಂಧಿಸಿದಂತೆ ನಮಗೆ ಯಾವತ್ತೂ ಕ್ರಯಪತ್ರ ಆಗಿಲ್ಲ ಎಂದರೆ ಸರಿ. 1 ನೇ ಪ್ರತಿವಾದಿ ದಾವಾ ಸ್ವತ್ತನ್ನು ಒತ್ತುವರಿ ಮಾಡಿಕೊಂಡಿರುತ್ತಾರೆ ಎಂಬುದು ನನಗೆ 2016 ರಲ್ಲಿ ಕಾಂಪೌಂಡ್ ಕಟ್ಟುವಾಗ ಗೊತ್ತಾಗಿರುತ್ತದೆ. ಪ್ರತಿವಾದಿಗಳು ಒತ್ತುವರಿ ಮಾಡಿರುವ ಬಗ್ಗೆ ದಾಖಲೆಗಳನ್ನು ನಾನು ಹಾಜರುಪಡಿಸಿರುತ್ತೇನೆ. 2016 ಕ್ಕೂ ಮೊದಲು 1 ನೇ ಪ್ರತಿವಾದಿ ದಾವಾ ಸ್ವತ್ತನ್ನು ಒತ್ತುವರಿ

ಮಾಡಿಕೊಂಡಿರುವ ಬಗ್ಗೆ ಗೊತ್ತಿರಲಿಲ್ಲ. ನಾನು ಈ ದಾವೆಯನ್ನು ಸಲ್ಲಿಸುವ ಮೊದಲು 1 ನೇ ಪ್ರತಿವಾದಿಯು ನನ್ನ ವಿರುದ್ಧ ದಾವೆ ಸಲ್ಲಿಸಿದ್ದರು ಎಂದರೆ ಸರಿಯಲ್ಲ. 2 ಮತ್ತು 3 ನೇ ಪ್ರತಿವಾದಿಗಳು 1 ನೇ ಪ್ರತಿವಾದಿಯ ಹೆಂಡತಿ ಮತ್ತು ಮಗ. ನನಗೂ ಮತ್ತು ಪ್ರತಿವಾದಿಗೂ ಯಾವತ್ತೂ ವಿಶ್ವಾಸ ಇರಲಿಲ್ಲ. 1 ನೇ ಪ್ರತಿವಾದಿ ನನ್ನ ಮೇಲೆ ದೂರನ್ನು ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯ ಜಮೀನಿನಲ್ಲಿ ಏನಿತ್ತು ಎಂಬುದು ನನಗೆ ಗೊತ್ತಿಲ್ಲ. ಮೊದಲು ದಾವಾ ಸ್ವತ್ತಿನಲ್ಲಿ ನೀಲಗಿರಿ ಮರಗಳು ಇದ್ದವು. ಸದರಿ ಸಂಗತಿಯನ್ನು ದಾವೆಯಲ್ಲಿ ಹೇಳಿ ಬರೆಯಿಸಿರುವುದಿಲ್ಲ. ಸರ್ವೇ ನಂ.60 ರಲ್ಲಿ ದುರಸ್ತಿ ಮಾಡುವ ಮೊದಲು ದಾವಾ ಸ್ವತ್ತಿನಲ್ಲಿ ನಾರಾಯಣಪ್ಪರವರು ಸ್ವಾಧೀನದಲ್ಲಿ ಇದ್ದರು ಎಂದರೆ, ಸಾಕ್ಷಿಯು ಸುಮಾರು ಜನರು ಇದ್ದರು ನನಗೆ ನೆನಪಿಲ್ಲ ಎಂದು ಉತ್ತರಿಸುತ್ತಾರೆ. ದಾವಾ ಸ್ವತ್ತಿನ ಉತ್ತರಕ್ಕೆ ಇರುವ ಪ್ರತಿವಾದಿಯ ಆಸ್ತಿಯ ದಾಖಲೆಗಳನ್ನು ನಾನು ನೋಡಿರುವುದಿಲ್ಲ. 1990-91 ರಲ್ಲಿ 1 ನೇ ಪ್ರತಿವಾದಿಗೆ ಎಲ್ ಎನ್ ಡಿ ಸಿ ಆರ್ (ಜೆ) 147/1991 ರೀತ್ಯಾ ಸ್ವತ್ತು ಮಂಜೂರಾಗಿತ್ತು ಎಂದರೆ ಇರಬಹುದು ಎಂದು ಉತ್ತರಿಸುತ್ತಾರೆ.

10. 1 ನೇ ಪ್ರತಿವಾದಿಯ ಜಮೀನಿನ ಚಕ್ಕುಬಂದಿ ಹೇಳಲು ಬರುವುದಿಲ್ಲ. ದಾವಾ ಸ್ವತ್ತಿನ ಷೆಡ್ಯೂಲಿನಲ್ಲಿ ಉತ್ತರಕ್ಕೆ 1 ನೇ ಪ್ರತಿವಾದಿಯ ಜಮೀನು ಎಂದು ತೋರಿಸಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದ ಸರ್ವೇ ನಂ.94 ಮತ್ತು 95 ರಲ್ಲಿ ಒಂದು ಜಮೀನು ಮಾತ್ರ 1 ನೇ ಪ್ರತಿವಾದಿಯದ್ದು ಎಂದು ಉತ್ತರಿಸುತ್ತಾರೆ. ಕಲ್ಲಪ್ಪ ಎಂಬುವವರು 1 ನೇ ಪ್ರತಿವಾದಿಯ ಕುಟುಂಬಕ್ಕೆ ಸೇರಿದವರಾ ಎಂಬುದು ನನಗೆ ಗೊತ್ತಿಲ್ಲ.

11. ನಿಪಿ-1 ರಲ್ಲಿರುವ ನಾರಾಯಣಮ್ಮ ಮತ್ತು ನಾರಾಯಣಪ್ಪ ರವರನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ನಿಪಿ-1 ರಲ್ಲಿಯೂ ಸಹ ಉತ್ತರಕ್ಕೆ ನಾರಾಯಣಪ್ಪ ರವರ ಜಮೀನು ಎಂದು ನಮೂದಿಸಿಲ್ಲ ಮತ್ತು ನಿಪಿ-1 ರಲ್ಲಿ ಸರ್ವೇ ನಂಬರ್ ಸೇರಿಸಿದ್ದೇವೆ ಎಂದರೆ ಸರಿ. ಸಾಕ್ಷಿಯು ಮುಂದುವರೆದ ನಾರಾಯಣಪ್ಪರವರ ಹೆಸರಿನಲ್ಲಿ ಹಾಕಿರುವುದಿಲ್ಲ ಬದಲಾಗಿ ಸರ್ವೇ ನಂ.94 ಮತ್ತು 95 ಎಂದು ಹಾಕಿರುತ್ತೇವೆ ಎಂದು ನುಡಿಯುತ್ತಾರೆ.

12. ನಿಪಿ-3 ಮತ್ತು 4 ದಾವಾ ಸ್ವತ್ತಿಗೆ ಸಂಬಂಧಪಟ್ಟ ದಾಖಲೆಗಳು ಅಲ್ಲ ಎಂದರೆ ಸರಿಯಲ್ಲ. ನಿಪಿ-3 ಮತ್ತು 4 ರಲ್ಲಿರುವ ಸರ್ವೇ ನಂಬರ್ ಆಗಲೀ, ವಿಸ್ತೀರ್ಣವಾಗಲೀ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸಾಕ್ಷಿಯು ಎರಡೂ ಒಂದೇ ಆದ ಕಾರಣ ಸೇರಿಸಿಲ್ಲ ಎಂದು ಉತ್ತರಿಸುತ್ತಾರೆ. ನಿಪಿ-3 ರಿಂದ 6 ದಾಖಲೆಗಳಿಗೆ ಸಂಬಂಧಪಟ್ಟಂತೆ ಷೆಡ್ಯೂಲಿನಲ್ಲಿ ತೋರಿಸಿಲ್ಲ ಎಂದರೆ ಸಾಕ್ಷಿಯು, ವಾದ ಪತ್ರದ ಪ್ಯಾರಾ 9 ರಲ್ಲಿ ಹೇಳಿದ್ದು, ಷೆಡ್ಯೂಲಿನಲ್ಲಿ ತೋರಿಸಿಲ್ಲ

ಎಂದು ಹೇಳುತ್ತಾರೆ. ಸರ್ವೇ ನಂ.101/1 ಮತ್ತು 101/2 ಆದ ನಂತರ ಚಕ್ಕುಬಂದಿ ಬೇರೆ ಬೇರೆಯಾಗುತ್ತವೆ ಎಂದರೆ ಸರಿ.

13. ನಿಪಿ-3 ರಿಂದ 6 ರಲ್ಲಿರುವ ಸರ್ವೇ ನಂಬರ್ ಸ್ವತ್ತುಗಳಿಗೆ ಸಂಬಂಧಿಸಿದಂತೆ ಎ.ಸಿ. ನ್ಯಾಯಾಲಯದಲ್ಲಿ ಪ್ರಕರಣಗಳು ನಡೆದಿದ್ದವು ಎಂದರೆ ನನಗೆ ನೆನಪಿಲ್ಲ. ನಿಪಿ-8 ರಲ್ಲಿರುವ ಚಕ್ಕುಬಂದಿ ಮತ್ತು ದಾವಾ ಷೆಡ್ಯೂಲಿನಲ್ಲಿರುವ ಚಕ್ಕುಬಂದಿ ಬೇರೆ ಬೇರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ನಾನು ಸರ್ಕಾರಕ್ಕೆ ಕಂದಾಯ ಪಾವತಿಸಿಲ್ಲ ಎಂದರೆ ಸರಿಯಲ್ಲ. ಕಂದಾಯ ರಶೀದಿಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಕನ್ವರ್ಷನ್ ಮತ್ತು ಪಂಚಾಯತಿ ಹೌಸ್ ಲಿಸ್ಟ್ ಟೌನ್ ಪ್ಲಾನ್ ಅಪ್ರೂವ್ಡ್ ಆಗಿರುತ್ತದೆ. ಸರ್ಕಾರಕ್ಕೆ ಹಣವನ್ನು ಪಾವತಿಸಿರುತ್ತೇನೆ. ಈ ಎಲ್ಲಾ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇದೆಯೇ ಎಂದರೆ ಸಾಕ್ಷಿಯು ನಾನ್ಯಾಕೇ ಕೊಡಲಿ ಎಂದು ಉತ್ತರಿಸುತ್ತಾರೆ. ಮುಂದುವರೆದು ಅವಶ್ಯಕತೆ ಇದ್ದರೆ ಕೊಡುತ್ತೇನೆ ಎಂದು ಉತ್ತರಿಸುತ್ತಾರೆ.

14. ಕನ್ವರ್ಷನ್ ಆದಾಗ ಹೌಸ್ ಲಿಸ್ಟ್ ನಂಬರ್ ಬರುತ್ತದೆ. ಸರ್ವೇ ನಂಬರ್ ಹೊರಟು ಹೋಗುತ್ತದೆ ಎಂದರೆ ಸರಿ. ವಾದ ಪತ್ರದಲ್ಲಿ ಈ ವಿಚಾರಗಳನ್ನು ಹೇಳಿಲ್ಲ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ಎಷ್ಟು ಸೈಟುಗಳು ಆಗಿವೆ ಎಂಬುದನ್ನು ಪ್ಲಾನ್ ನೋಡಿ ಹೇಳಬೇಕು. ಕನ್ವರ್ಷನ್ ಆಗಿರುವ ವಿಚಾರವನ್ನು ವಾದಪತ್ರದಲ್ಲಿ ಹೇಳದೆ ಪ್ರತಿವಾದಿಯು ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ಹಳೆಯ ಸರ್ವೇ ನಂಬರನ್ನು ನೀಡಿ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಆಸ್ತಿ ಈಗಲೂ ಸರ್ವೇ ನಂಬರ್ ಜಮೀನು ಆಗಿಯೇ ಇದೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಜಮೀನು ಸಹ ಕನ್ವರ್ಷನ್ ಆಗಿರುತ್ತದೆ. ಯಾವ ವರ್ಷದಲ್ಲಿ ಕನ್ವರ್ಷನ್ ಆಗಿರುತ್ತದೆ ಎಂದು ಗೊತ್ತಿಲ್ಲ. ದಾವಾ ಸರ್ವೇ ನಂಬರ್ ಸ್ವತ್ತು ಅಸ್ತಿತ್ವದಲ್ಲಿ ಇಲ್ಲ ಎಂದರೆ ಸರಿಯಲ್ಲ. ಪಿ ಟಿ ಸಿ ಎಲ್ 60/8-9 ದಾವಾ ಸ್ವತ್ತಿಗೆ ಸಂಬಂಧಿಸಿರುತ್ತದೆ. ದಾವಾ ಸ್ವತ್ತು ಮತ್ತು ನನಗೂ ಯಾವುದೇ ರೀತಿಯ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ದಾವೆಯನ್ನು ಸಲ್ಲಿಸಲು ಯಾವುದೇ ವ್ಯಾಜ್ಯ ಕಾರಣ ಇಲ್ಲದೇ ಇದ್ದರೂ ಸಹ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತು 1 ನೇ ಪ್ರತಿವಾದಿಯ ಸ್ವತ್ತಾಗಿರುತ್ತದೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ಮತ್ತು ನಾನು ಹಾಜರುಪಡಿಸಿರುವ ದಾಖಲೆಗಳಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

15. ನಿಪಿ-9 ರಲ್ಲಿ ಬೇರೆ ಬೇರೆ ಚಕ್ಕುಬಂದಿಗಳನ್ನು ತೋರಿಸಿರುತ್ತೇನೆ ಎಂದರೆ ಸರಿ. ನಿಪಿ-9 ರಲ್ಲಿರುವುದು ವಾಸ್ತವ ಚಕ್ಕುಬಂದಿ ಎಂದರೆ ಸರಿ. ನಿಪಿ-9 ರಲ್ಲಿ ಇರುವ ಚಕ್ಕುಬಂದಿಯನ್ನು ದಾವೆಯಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ನಿಪಿ-9 ರಲ್ಲಿರುವ ಸ್ಕೆಚ್ ಮತ್ತು ಚಕ್ಕುಬಂದಿ ಸರಿ ಇದೆ ಎಂದರೆ ಸಾಕ್ಷಿಯು ಎರಡು ಚಕ್ಕುಬಂದಿಯಲ್ಲಿ ಒಂದು ಮಾತ್ರ ಬೇರೆ ಇದೆ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಯ ಜಮೀನನ್ನು ನಾನು ನೋಡಿಲ್ಲ, ಕೇವಲ ದಾಖಲೆಗಳನ್ನು ಆಧರಿಸಿ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ. ಹೇ. ಕೇ. ಸರಿ ಇದೆ.

**ಸಹಿ/-**
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಶಿಡ್ಲಘಟ್ಟ.